

ಅಲಕ ತೀರ್ಥಹಳ್ಳಿ
ಕಲೆ: ವಿಶ್ವನಾಥ ಎ.ಎಸ್.

# ಮಾತು-ಕತೆ

**ಮುರಳೀಧರ ಮತ್ತು ಮಾದೇವ :**

ನಿನ್ ಕಥೆ ತರ ನನ್ನ ಕಥೆ ಅಲ್ಲವೋ ಮಾದೇವಾ-ಏನೇನೂ ಕುತೂಹಲ ಅನ್ನೋದೇ ಇರೋಲ್ಲ. ನೀನಾದ್ರೆ ಹುಡುಗಾಟದಲ್ಲೇ ಮನೆಬಿಟ್ಟು ಓಡಿಹೋದಾಂವ. ನಿಂದು ಹೆಜ್ಜೆಹೆಜ್ಜೇನೂ ಕಥೇನೇ. ನಿಂಗೆ ನಾಳಿನ ಕಥೆ ನಾಳೇನೇ ಗೊತ್ತಾಗೋದು; ನಂದು ಹಂಗಲ್ಲ. ಮುಂದಿನ ಹತ್ತು ವರ್ಷದ ಕಥೇನ ಇವತ್ತೇ ಹೇಳ್ಬೌದು. ಯಾವತ್ತು? ಎಷ್ಟು ಹೊತ್ತಿಗೆ? ಏನು, ಎತ್ತ? ಎಲ್ಲಾ ಗ್ವಾಡೇ ಮೇಲಿನ ಕ್ಯಾಲೆಂಡರಲ್ಲಿ ಪ್ರಿಂಟ್ ಹಾಕಿರ್ತಾರೆ ನೋಡು, ಹಂಗೆ! ಆದ್ರೆ ಏನೋ ಒಂದಿಷ್ಟು ಅನಿರೀಕ್ಷಿತ ತಿರುವು ಅಂತ ಇದ್ರೆ, ಅದು ಇತ್ತೀಚಿಗೆ ನಡೆದಿದ್ದು. ಅದೂ ನನ್ನ ಮೊಮ್ಮಗ ರಾಜಸ್ಥಾನದ ಪಿಲಾನಿಯಿಂದ ಬಂದ ಮೇಲೆ! ಇರ್ಲಿ. ಮೊಮ್ಮಗನ ಕಥೆ ಕೊನೆಗೆ ಹೇಳ್ತೀನಿ. ನೀನು ಎಸ್ಸೆಸ್ಸೆಲ್ಸಿ ಪರೀಕ್ಷೆ ಮುಗ್ಸಿದ ಪುಣ್ಯಾತ್ಮ. ನಿನ್ನ ಜೀವದ ಗೆಳೆಯ ಆಗಿದ್ದ ನಂಗೂ ಒಂದು ಮಾತು ಹೇಳ್ದೆ ಓಡಿ ಹೋಗಿಬಿಟ್ಟೆ. ನೀನು ಶಿವಮೊಗ್ಗಕ್ಕೆ ಹೋಗಿದ್ದು, ಅಲ್ಲಿ ಹೋಟ್ಲು ಸೇರ್ಕೊಂಡಿದ್ದೂ, ಆಮೇಲೆ ಬೆಂಗಳೂರಿಗೆ ಹೋಗಿ ಏನೇನೋ ಮಾಡಿದ್ದೂ... ಅದೆಲ್ಲ ಗೊತ್ತಾಗಿದ್ದು ಇವತ್ತೇ!

ನಿನ್ನ ಕಥೆ ಆಯ್ತಲ್ಲ, ಅದು ಬಿಡು. ನನ್ನ ಕಥೆ ಕೇಳು: ಎಸ್ಸೆಸ್ಸೆಲ್ಸಿ ಫಸ್ಟ್ ಕ್ಲಾಸ್ ಬರ್ತೀನಿ ಅಂತ ಗೊತ್ತಿತ್ತು- ಬಂದೆ; ನನ್ನ ಅಣ್ಣ ಬೆಂಗಳೂರಿಗೆ ಕರ್ಕೊಂಡು ಹೋಗ್ತಾನೆ ಅಂತ ಗೊತ್ತಿತ್ತು- ಕರ್ಕೊಂಡು ಹೋದ; ಪೀಯೂಸಿ, ಡಿಗ್ರಿ ಎಲ್ಲ ಆಗಿ ಕೆಲಸ ಸಿಕ್ತು... ಮುಂದೇನು? ಮದ್ವೆ , ಮಕ್ಳು ಅಷ್ಟೇ ತಾನೇ! ಅದೂ ಕೂಡ ಆಸೆ ಪಟ್ಟ ಹಾಗೆ ಒಂದು ಹೆಣ್ಣು, ಒಂದು ಗಂಡು. ಮಗ ಎಂಜಿನಿಯರಿಂಗ್ ಮುಗಿಸಿ ಕೆಲ್ಸಕ್ಕೆ ಸೇರೋ ಹೊತ್ತಿಗೆ ಮಗಳ ಮದುವೆ ಮಾಡಿದ್ದೆ. ಇನ್ನೇನು ರಿಟೈರ್‌ಮೆಂಟ್‌ಗೆ ಒಂದು ವರ್ಷ ಇದೆ ಅನ್ನುವಾಗ ನಾವು, ಗಂಡ- ಹೆಂಡ್ತಿ ಗಂಭೀರವಾಗಿ ಚರ್ಚೆ ಮಾಡಲು ಶುರು ಮಾಡಿದೆವು; ಚರ್ಚಾ ವಿಷಯ: ಹಳ್ಳಿಯ ಜೀವನ ಒಳ್ಳೆಯದೋ ಅಥವಾ ನಗರ ಜೀವನವೋ? ಕೊನೆಯಲ್ಲಿ ನಾನಂದೆ: ಇಷ್ಟು ವರ್ಷ ನೌಕರಿಯಲ್ಲಿ ಎಷ್ಟು ಊರು ಸುತ್ತಿದೀವಿ. ಗ್ರಾಮ, ಪಟ್ಟಣ, ನಗರ... ಇವತ್ತು, ನಮ್ಮ ಮುಂದೆ ಇಂಥ ಪ್ರಶ್ನೆ ಬರಬಾರದು ಅಲ್ಲವಾ? ಅವಳಂದ್ಲು: ಹೌದು. ಆದ್ರೆ, ಆವಾಗ ಆಯ್ಕೆ ನಮ್ಮ ಕೈಯಲ್ಲಿ ಇತ್ತಾ? ಬೆಕ್ಕಿನ ಸಂಸಾರ ಅದು. ನಮ್ಮ ಇಷ್ಟದ ಜನವಾ? ಅಡುಗೆಯಾ? ಊಟವಾ? ನಮ್ಮ ಕಥೆ ಇರಲಿ, ಮಕ್ಕಳಿಗೆ ಎಲ್ಲಿ, ಏನ್ ಸಿಕ್ತು? ಇಷ್ಟದ ಬಟ್ಟೆ- ಬರೆಯಾ? ಶಾಲೆಯಾ? ಸ್ನೇಹಿತರಾ? ನೆಂಟರಾ ಇಷ್ಟರ? ನೀವು ತಂದ್ರಿ, ನಾವು ತಿಂದ್ವಿ... ನಾನಂದೆ: ಆಯ್ತಲ್ಲಮ್ಮ. ಅದೆಲ್ಲ ಆಗಿಹೋಗಿದ್ದು, ಅದನ್ನ ಬಿಟ್ಹಾಕು. ಮುಂದೇನು ಹೇಳು? ಅವಳಂದ್ಲು: ನನ್ನ ಯಾವ ಮಾತು ಈ ಮನೇಲಿ ನಡಿಯುತ್ತೆ? ಸುಮ್ನೆ ಗೋಡೆಗೆ ಯಾಕೆ ಹೇಳಬೇಕು? ನೀವು ನಿಮ್ಮ ಹುಟ್ಟೂರಿಗೆ ಹೋಗೋಣ ಅಂತೀರಿ. ನಿಮ್ ಹೊಕ್ಕುಬಳ್ಳಿ ಹೂತಿರೋದು ಅಲ್ಲೇ ಅಲ್ವಾ? ನಾನು ಅವಳ ಮಾತಿಗೆ ರೇಗಲಿಲ್ಲ; ಇನ್ನೂ ಸಮಾಧಾನದಲ್ಲೇ